# ನಾನ್ಯಾರಿಗಲ್ಲದವಳು

ಬಿದಿರು ಗ್ರಾಮೀಣ ಜಗತ್ತಿನ ದೈನಂದಿನ ಜನಜೀವನದಲ್ಲಿ ಹಾಸುಹೊಕ್ಕಾಗಿದೆ. ಕನ್ನಡದ ಮೌಖಿಕ ಸಾಹಿತ್ಯ ಮತ್ತು ಅನುಭಾವಿ ಗೀತೆಗಳು ಬಿದಿರಿನ ಬಹೂಪಯೋಗಿ ಗುಣಗಳನ್ನು ಕುರಿತು ಹಲವು ವಿಧಗಳಲ್ಲಿ ಹಲವು ರಾಗಗಳಲ್ಲಿ ಹಾಡಿವೆ. ಏಳು ಸಾವಿರ ವರ್ಷಗಳಿಂದಲೂ ಮಾನವ ನಾಗರಿಕತೆಯ ಜೀವನದೊಂದಿಗೆ ಬಿದಿರು ಬೆಸೆದುಕೊಂಡಿದೆ ಎಂದು ಹೇಳಲಾಗುತ್ತಿದೆ. ಬಿದಿರಿನ ಮೂಲ ಚೀನಾ ಮತ್ತು ಭಾರತವೆಂದು ತಿಳಿದುಬಂದಿದೆ. ಭಾರತದ ಉದ್ದಗಲಕ್ಕೂ ಹರಡಿಕೊಂಡಿರುವ ಬಿದಿರು ಭಾರತದ ಗ್ರಾಮೀಣ ಜನರ ನಿತ್ಯ ಬಳಕೆಯಲ್ಲಿದೆ. ವಿಶೇಷವಾಗಿ ಈಶಾನ್ಯ ಭಾರತದಲ್ಲಿ ಇದರ ಬಳಕೆಯ ಸ್ವರೂಪವನ್ನು ನೋಡಿದರೆ ಬಿದಿರಿನ ಬಳಕೆಯ ಅನಂತ ರೂಪಗಳು ಎದುರು ನಿಲ್ಲುತ್ತವೆ. ಹೀಗೆಯೇ ಬಿದಿರು ಚೀನಾದ ಅಧ್ಯಾತ್ಮ ಪರಂಪರೆಯ ಕೇಂದ್ರದಲ್ಲೂ ಬಳಕೆಯಾಗಿದೆ. ಶಕ್ತಿ, ನಂಬಿಕೆ ಹಾಗೂ ಬಾಗುವ, ತಾಳಿಕೊಳ್ಳುವ ಗುಣ ಇರುವುದು ಬಿದಿರಿಗೆ ಮಾತ್ರ.

ಅನೇಕಾಂತದ ಸಮರ್ಥ ರೂಪಕದಂತಿರುವ 'ಬಿದಿರು ನಾನ್ಯಾರಿಗಲ್ಲದವಳು...' ಗೀತೆಯಂತೂ ನಾಡಿನುದ್ದಗಲಕ್ಕೂ ಎಲ್ಲರ ನಾಲಗೆಯ ಮೇಲೆ ಮರುರೂಪ ತಾಳುತ್ತಲೇ ಇದೆ. ಬದುಕಿನೊಂದಿಗೆ ತಾಳೆಯಾಗದ, ಸತ್ವವಿಲ್ಲದ ಯಾವ ರಚನೆಯೂ ಹೀಗೆ ಮಾನವರ ಹೃದಯದೊಂದಿಗೆ ಬೆಸೆದುಕೊಳ್ಳುವುದಿಲ್ಲ. ಹಾಗಾದರೆ ಈ ಗೀತೆ ಬದುಕಿನ ಯಾವುದೊ ಒಂದು ದರ್ಶನವನ್ನು ಕಾಣಿಸುತ್ತಿದೆಯೆ! ಎಂದು ಕೇಳಿಕೊಂಡರೆ, ಇಲ್ಲ ಎಂದು ಹೇಳಲಾಗುವುದಿಲ್ಲ! ಆದ್ದರಿಂದಲೇ ಈ ಗೀತೆ ಕಡಿದಷ್ಟೂ ಕುಡಿಯೊಡೆಯುವ ಅಮೃತಬಳ್ಳಿಯಂತೆ, ಗುರುಮಾರ್ಗದ ಪರಂಪರೆಯಲ್ಲಿ ಮತ್ತೆ ಮತ್ತೆ ಏಕತಾರಿಯೊಂದಿಗೆ ಕೇಳಿಬರುತ್ತಲೇ ಇರುತ್ತದೆ. 'ಬಿದಿರು ನಾನ್ಯಾರಿಗಲ್ಲದವಳು' ಗೀತೆ ಶಿಶುನಾಳ ಶರೀಫರ ರಚನೆಗಳಲ್ಲೊಂದು ಎಂದು ಭಾವಿಸಲಾಗಿದೆ. ಇದನ್ನು ವಿವಾದ ಮಾಡಬಾರದು! 'ಅಲೆಗಳಿಗೇನು ಗೊತ್ತು ಕಡಲಿನ ಗುಣ...' ಅದೇ ವೇಳೆಯಲ್ಲಿ ಈ ಹಾಡು ಯಾವುದೇ ಅಂಕಿತವಿಲ್ಲದೆ ಮಧ್ಯಕರ್ನಾಟಕದ ಜನಪದ ಗೀತೆಗಳಲ್ಲೂ ಪ್ರವೇಶ ಪಡೆದಿದೆ. ಹೀಗೆ ಜನಪದ ಮತ್ತು ಅನುಭಾವಿ ವಲಯದಲ್ಲಿ ಈ ದಡದಿಂದ ಆ ದಡಕ್ಕೆ, ಆ ದಡದಿಂದ ಈ ದಡಕ್ಕೆ ಹರಿದಾಡುವ ಈ ಗೀತೆ ಬಿದಿರಿನೊಂದಿಗೆ ಹೆಣೆದುಕೊಂಡಿರುವ ನಮ್ಮ ಲೌಕಿಕ ಅನುಭವಗಳನ್ನು ಹೇಳುತ್ತಲೇ, ಲೌಕಿಕದಿಂದ ಆಚೆಗೆ ಜಿಗಿದು ಅಧ್ಯಾತ್ಮಿಕ ಲೋಕದ ಅನುಭವವನ್ನೂ ಅರಿವಿಗೆ ತರುವ ಸಾಮರ್ಥ್ಯವನ್ನು ಪಡೆದಿದೆ.

ಸಂತರ ಗೀತೆಗಳೆಂದರೆ ಅವು ಒಂದು ಭೌಗೋಳಿಕ ಪ್ರದೇಶದಿಂದ ಮತ್ತೊಂದು ಭೌಗೋಳಿಕ ಪ್ರದೇಶಕ್ಕೆ ಯಾರ ಅಪ್ಪಣೆಯನ್ನೂ ಪಡೆಯದೆ ನದಿಯ ನೀರಿನಂತೆ, ಮೋಡಗಳಂತೆ ಸ್ವತಂತ್ರವಾಗಿ ಸಾಗಿಬಿಡುತ್ತವೆ. ಹೀಗೆ ಗಡಿಗಳನ್ನು ದಾಟಿ ಎಲ್ಲರನ್ನೂ ಒಳಗೊಳ್ಳುವ ಗುಣ ಜಗತ್ತಿನ ಎಲ್ಲ ಅನುಭಾವಿ ರಚನೆಗಳಿಗೂ ಇದೆ. ಆದ್ದರಿಂದಲೇ ಕಪಿಲಾ ನದಿಯ ದಂಡೆಯಲ್ಲಿರುವ ನಿಜಗುಣರ ರಚನೆಗಳು ಕೃಷ್ಣಾ ನದಿಯ ತೀರಕ್ಕೂ, ಶಂಕರಾನಂದ, ಮಲ್ಲಾರಯ್ಯರ ರಚನೆಗಳು ಕಾವೇರಿ ನದಿ ತೀರಕ್ಕೂ, ಕಡಕೋಳು ಮಡಿವಾಳಪ್ಪ, ಶಿಶುನಾಳ ಶರೀಫರ ರಚನೆಗಳು ಚಾಮರಾಜನಗರದ ಗುರು ಪೀಠಗಳಲ್ಲಿ ಕೇಳಿಬರುತ್ತದೆ.

'ಬಿದಿರು ನಾನ್ಯಾರಿಗಲ್ಲದವಳು
ಹುಟ್ಟೂತ ಹುಲ್ಲಾದೆ ಬೆಳೆಯುತಾ ಮರವಾದೆ
ತಿಪ್ಪೆಯ ಕೆಳಗಿದ್ದೆ ಬಂಡೆಯ ಕೆಳಗಿದ್ದೆ
ರಂಗನಿಗೆ ಕೊಳಲಾದೆ / ಕಂದನಿಗೆ ತೊಟ್ಟಿಲಾದೆ
ಆಡುವ ಮಕ್ಕಳಿಗೆ ಓಡುವ ಕುದುರೆಯಾದೆ
ಅತ್ತೆ ಮನೆ ಸೊಸೆಯಾರಿಗೆ ಬೀಸುವ ಕುಕ್ಕೆಯಾದೆ
ಮುತ್ತೈದೆ ಮಕ್ಕಳಿಗೆ ಬಾಗಿನದ ಮೊರವಾದೆ
ಮದುವೆಯ ಹಂದರಕ್ಕೆ ಚಪ್ಪರದ ಕಂಬವಾದೆ
ಸಿದ್ದರಾಮೇಶ್ವರಗೆ ನಂದೀಯ ಕೋಲಾದೆ
ಆಡುಕಾಯೊ ಮಕ್ಕಳಿಗೆ ಸೆಣೆಯೆಂಬ ಜವಳಿಯಾದೆ
ಕಾಳುಗಳ ಕೂಡಿಡಲು ಕಟ್ಟೀನಾ ಕಣಜವಾದೆ
ಊರೂರು ಸೂರಾದೆ
ಕೂರಿಗಗೆ ಕೊಳವೆಯಾದೆ
ಮುಪ್ಪಿನಾ ಮುದುಕರಿಗೆ ಊರೆಂಬ ಕೋಲಾದೆ
ಪಲ್ಲಕ್ಕಿಗೆ ದಂಡಿಗ್ಯಾದೆ ಪತ್ರೆಗೆ ಬುಟ್ಟಿಯಾದೆ
ಅಂಬಿಗಗೆ ಹರಿಗೋಲಾದೆ
ಮೇದಾರಗೆ ಬುಟ್ಟಿಯಾದೆ
ಹತ್ತುವವಗೆ ಏಣಿಯಾದೆ'

ತಿಪ್ಪೆಯ ತಳದಲ್ಲಿ ಹುಟ್ಟಿ, ಸಾಧನೆಯ ಶಿಖರ ತಲುಪಿ ಎಲ್ಲರ ಬದುಕಿಗೂ ಆಸರೆಯಾಗಿ ಬಾಳುವ ಬಿದಿರಿನಂತೆ, ಎಲ್ಲರ ಬಾಳು ಎಲ್ಲರಿಗಾಗಿ ಇರಲಿ ಎಂಬುದನ್ನು ಲಯದ ಸಾಮರಸ್ಯ, ವರ್ಣನೆಯ ಸ್ಥಿರತೆಯ ಮೂಲಕ ಈ ಗೀತೆ ಹಂಬಲಿಸುತ್ತದೆ.

ಹೀಗೆ ಪರಿಚಿತ ಲೋಕದಲ್ಲೇ ವಿಹರಿಸುವ ಈ ಗೀತೆ ಪ್ರಖ್ಯಾತ ಜನಪದ ಗಾಯಕ ಬಾನಂದೂರು ಕೆಂಪಯ್ಯನವರು ಹಾಡುವ ಕ್ಲಾಸಿಕ್‌ಗಳಲ್ಲಿ ಒಂದು. ಶಿಶಿರ ಋತುವಿನಲ್ಲಿ ಕುಳಿತು ಈ ಹಾಡನ್ನು ಕೇಳಿದರೆ ನಮ್ಮ ಕಣ್ಣೆದುರು ವಸಂತ ಋತುವೇ ಇಳಿದಂತಾಗುತ್ತದೆ. ಇದೇ ಹಾಡನ್ನು ಎಚ್. ಜನಾರ್ಧನ (ಜನ್ನಿ) ಅವರ ಕಂಠದಲ್ಲಿ ಕೇಳಿದರೆ, ನಿಮ್ಮ ಮೇಲೆ ಬಿಸಿಲು ಸುರಿದರೂ ಎಚ್ಚರಗೊಳ್ಳುವುದಿಲ್ಲ! ಬಿದಿರಿನ ಏಣಿ ಅಧ್ಯಾತ್ಮಿಕ ಸಾಧನೆಯ ಇನ್ನೊಂದು ಹಂತ ಎನ್ನುವುದನ್ನು ಧ್ವನಿಯ ಏರಿಳಿತದ ಮೂಲಕವೇ ನಮಗೆ ಕಾಣಿಸುವ ಜನ್ನಿ ಅವರ ಹಾಡುವ ಶಕ್ತಿ ಮತ್ತು ಸಾಮರ್ಥ್ಯಗಳು ಎತ್ತರದಲ್ಲಿ ನಿಲ್ಲುತ್ತವೆ. ಇವರಿಬ್ಬರೂ ಮೂಲತಃ ಕ್ಲಾಸಿಕಲ್ ಗಾಯಕರಲ್ಲ! ಆದರೆ ಅದನ್ನೂ ಮೀರಿ ಕನ್ನಡ ಸೊಲ್ಲಿನಲ್ಲಿರುವ ಆಧ್ಯಾತ್ಮಿಕ ವಿಕಾಸದ ಗುಣವನ್ನು ಅರಿತ ದೇಸಿ ಗಾಯಕರು. ಸ್ವಗತದಂತೆ ಕಂಡುಬರುವ ಈ ಗೀತೆ, ಬಿದಿರಿನ ನಿತ್ಯ ಬಳಕೆಯ ವಿವರಗಳನ್ನು ಕಾಣಿಸುವ ಸಾಮಾಜಿಕ ಧ್ಯಾನದಲ್ಲಿ ಮುಳುಗಿ, ನಿಧಾನವಾಗಿ ತನ್ನನ್ನು ಬಣ್ಣಿಸಿಕೊಳ್ಳುತ್ತಲೆ, ಇನ್ನೊಂದು ಹಂತದಲ್ಲಿ ಆಧ್ಯಾತ್ಮಿಕ ಅರಿವಿನ ಸ್ಫೂರ್ತಿಯ ಮೂಲದತ್ತ ಹರಿಯುತ್ತದೆ. ಶಿಷ್ಟ ಮಾರ್ಗದ ಪ್ರಭಾವಳಿಯತ್ತ ಸುಳಿಯದೆ, ಜನಪದರ ತಿಳಿಗನ್ನಡದ ಚೌಕಟ್ಟಿನಲ್ಲೇ ತನ್ನ ಔನ್ನತ್ಯವನ್ನು ಕಂಡುಕೊಂಡಿರುವ ಈ ಗೀತೆಯ ಶ್ರೇಷ್ಠತೆ ಇರುವುದು ಇಲ್ಲಿಯೇ.

ನೀವು ಈ ಹಾಡನ್ನು ಜನಪದ ಗೀತೆಯೆಂದಾದರೂ ಕರೆಯಿರಿ, ಅಥವಾ ತತ್ತ್ವಪದವೆಂದಾದರೂ ಕರೆಯಿರಿ. ಯಾವ ರೂಪದಲ್ಲಾದರೂ ಸರಿಯೆ, ಮನಸ್ಸನ್ನು ಮೋಹಿಸುವಷ್ಟು ಸುಂದರವಾಗಿರುವ ಈ ಗೀತೆಯನ್ನು ಕೇಳಿದಾದ ಮೇಲೆ ನೀವು ಈ ಹಾಡಿನ ಅನುಯಾಯಿಯೆ ಆಗಿ, ಹುಣ್ಣಿಮೆ ಬೆಳಕಿನ ದಾಹದಲ್ಲಿರುತ್ತೀರಿ. ಈ ಗೀತೆಯ ಅಮರತ್ವದ ಗುಣ ಅದರ ಸರಳತೆ ಮತ್ತು ಸೌಂದರ್ಯದಲ್ಲಿದೆ.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ತನ್ನ ಕರ್ತವ್ಯವನ್ನು ಸರಿಯಾಗಿ ಮಾಡುತ್ತಿರುವವನಿಗೆ ಜಗತ್ತು ಎಂದೂ ಬೇಸರದ್ದಾಗಿ ಕಾಣುವುದಿಲ್ಲ.
  —ಮಹಾತ್ಮ ಗಾಂಧಿ
- ಎಲ್ಲರನ್ನೂ ಎಲ್ಲ ಕಾಲಕ್ಕೂ ಮೋಸಪಡಿಸಲು ಸಾಧ್ಯವಿಲ್ಲ.
  —ಅಬ್ರಹಾಂ ಲಿಂಕನ್
- ಜೀವನ ಸುದೀರ್ಘವಾಗುವುದಕ್ಕಿಂತ ಮಹಾನ್ ಆಗಿರುವುದು ಉತ್ತಮ.
  —ಬಿ.ಆರ್. ಅಂಬೇಡ್ಕರ್
- ಹೆಚ್ಚು ಹೆಚ್ಚು ಸಂಪಾದಿಸುವವರು ಸಂತುಷ್ಟ ವ್ಯಕ್ತಿಗಳಲ್ಲ. ಹೆಚ್ಚು ಹೆಚ್ಚನ್ನು ಕೊಡುವವರೇ ನಿಜವಾದ ಸಂತುಷ್ಟರು.
  —ಎಚ್. ಜಾಕ್ಸನ್ ಬ್ರೌನ್
- ಎಲ್ಲರೂ ತಮ್ಮ ತಮ್ಮ ಬುದ್ಧಿಗೆ ತೋಚಿದ್ದನ್ನು , ತಮಗೆ ಉತ್ತಮವೆಂದು ತೋರಿದ ಕ್ರಮದಲ್ಲಿ ಚೆನ್ನಾಗಿಯೇ ಹೇಳುತ್ತಾರೆ. ವಿದ್ಯೆ ಲೋಕದಲ್ಲಿ ಯಾರೋ ಒಬ್ಬರಿಗಾಗಿ ಬಂದುದಲ್ಲ.
  —ಚೌಂಡರಸ
- ಬಂದ ಸುಖವ ಬಿಡಬೇಡ, ಬಾರದುದ ಬೇಕೆಂದು ಬಯಸಬೇಡ.
  —ರತ್ನಾಕರವರ್ಣಿ
- ಕಾಡುಗಳು ನಾಶವಾದರೆ ಮತ್ತೆ ಮನುಷ್ಯ ಅವುಗಳನ್ನು ಪುನಃ ಸೃಷ್ಟಿಸಲು ಸಾಧ್ಯವಿಲ್ಲ. ಸ
  —ಕೆ.ಪಿ. ಪೂರ್ಣಚಂದ್ರ ತೇಜಸ್ವಿ
- ಸುಖೀ ಸಂಸಾರ ಎಂದರೆ, ಇಬ್ಬರು ಬುದ್ಧಿವಂತರ, ಸಹನಶೀಲರ ಸಮಾಗಮ.
  —ಸುಭಾಷಿತ
- ವಿಮರ್ಶೆಯಿಲ್ಲದ ಪ್ರಜಾಪ್ರಭುತ್ವ ಎನ್ನುವುದು ವಿರೋಧಾಭಾಸ.
  —ಮ್ಯಾಕ್‌ಐವರ್